ಸೆಲೆಬ್ರಿಟಿ ■ ಹನಿ

# ‘ಬ್ಲ್ಯಾಕ್’ ಮಾರ್ಕ್?

‘ಫೇಸ್‌ಬುಕ್’ ಎನ್ನುವ ಮಾಯಾಪೆಟ್ಟಿಗೆಯ ಮಾಲೀಕ ಮಾರ್ಕ್ ಜೂಕರ್‌ಬರ್ಗ್, ಈಗ ಜಗತ್ತಿನ ಬಲಿಷ್ಠ ರಾಷ್ಟ್ರಗಳ ಸಂಸತ್ತುಗಳ ‘ಹಿಟ್‌ಲಿಸ್ಟ್’ನಲ್ಲಿದ್ದಾನೆ. ಎರಡು ವರ್ಷಗಳ ಹಿಂದೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚುನಾವಣಾ ಪ್ರಚಾರದ ವೇಳೆ ಫೇಸ್‌ಬುಕ್‌ನಲ್ಲಿರುವ 5 ಕೋಟಿಗೂ ಹೆಚ್ಚು ಗ್ರಾಹಕರ ವೈಯಕ್ತಿಕ ಮಾಹಿತಿಗಳನ್ನು ಅವರ ಅನುಮತಿಯಿಲ್ಲದೆ ಟ್ರಂಪ್ ಪ್ರಚಾರಕ್ಕೆ ಬಳಸಲಾಗಿದೆ ಎನ್ನುವುದು ಮಾರ್ಕ್ ವಿರುದ್ಧದ ಗುರುತರ ಆರೋಪ. ಫೇಸ್‌ಬುಕ್ ಸಂಸ್ಥೆಯ ಬಳಕೆದಾರರ ಮಾಹಿತಿಗಳನ್ನು ತಾನು ಚುನಾವಣಾ ವಿಶ್ಲೇಷಣೆಗೆ ಬಳಸಿಕೊಂಡಿರುವುದಾಗಿ ಕೇಂಬ್ರಿಡ್ಜ್ ಅನಾಲಿಟಿಕಾ ಎಂಬ ಸಂಸ್ಥೆ ಹೇಳಿದ್ದೇ ವಿವಾದ ಭುಗಿಲೆದ್ದಿದೆ. ಬಳಕೆದಾರರ ಅನುಮತಿ ಇಲ್ಲದೆ ಅಥವಾ ಫೇಸ್‌ಬುಕ್ ಕಂಪೆನಿಯ ಷೇರುದಾರರ ಅನುಮತಿ ಇಲ್ಲದೆ ಈ ಮಾಹಿತಿಗಳು ಹೇಗೆ ಬಳಕೆಯಾದವು? ಅನಾಲಿಟಿಕಾ ಸಂಸ್ಥೆ ಮಾಹಿತಿ ಬಳಸಿಕೊಂಡದ್ದು ತನಗೆ ಗೊತ್ತೇ ಇಲ್ಲ, ಯಾರೋ ಸಂಶೋಧಕನೊಬ್ಬ ಕೆಲವು ಮಾಹಿತಿಗಳನ್ನು ಬಳಸಿದ್ದು ನಿಜ ಎಂದು ಜೂಕರ್‌ಬರ್ಗ್ ಹೇಳಿದ್ದಾನೆ. ಈಗ ಅಮೆರಿಕದ ಸಂಸತ್ತು, ಯೂರೋಪಿಯನ್ ಒಕ್ಕೂಟ ಮತ್ತು ಬ್ರಿಟನ್ ಸಂಸತ್ತುಗಳು ಮಾರ್ಕ್ ತಮ್ಮ ಮುಂದೆ ಬಂದು ಈ ಕುರಿತು ಸ್ಪಷ್ಟನೆಗಳನ್ನು ನೀಡಬೇಕೆಂದು ನೋಟಿಸ್ ಕಳುಹಿಸಿವೆ. ‘ಬ್ರಿಟನ್ ಸಂಸತ್ತಿನ ಎದುರು ದೂತನನ್ನು ಕಳುಹಿಸುತ್ತೇನೆ’ ಎಂದಿದ್ದಾನೆ ಮಾರ್ಕ್. ಜೊತೆಗೇ, ಆಗಿರುವ ತಪ್ಪಿಗೆ ಬಹಿರಂಗವಾಗಿ ಕ್ಷಮೆ ಯಾಚಿಸಿದ್ದಾನೆ.

ವಿಶ್ವದಾದ್ಯಂತ 220 ಕೋಟಿ ಜನರು (ಭಾರತದಲ್ಲಿ 25 ಕೋಟಿ ಜನ) ಫೇಸ್‌ಬುಕ್ ಬಳಸುತ್ತಿದ್ದಾರೆ. ರಾಜಕೀಯ ಪಕ್ಷದವರಿಗೆ ಮಾತ್ರವಲ್ಲ, ಬಹುತೇಕ ಎಲ್ಲ ಮಾರಾಟ ಕಂಪೆನಿಗಳಿಗೂ ನಿಮ್ಮ ಮಾಹಿತಿಗಳು ರವಾನೆ ಆಗಿರಬಹುದು. ನೀವು ಯಾವ ಆಹಾರ ತಿನ್ನುತ್ತೀರಿ, ಯಾವ ಬಟ್ಟೆ ಮೆಚ್ಚುತ್ತೀರಿ, ನಿಮ್ಮ ಗೆಳೆಯರು ಯಾರು, ನಿಮ್ಮ ಆಸೆಗಳೇನು.. ನಿಮ್ಮ ಶಿಕ್ಷಣ, ಆಸ್ತಿ ವಿಚಾರಗಳೇನು.. ಮುಂತಾಗಿ ಎಲ್ಲವೂ ಈಗ ಪಕ್ಷಗಳಿಗೆ ಮತ್ತು ಮಾರಾಟ ಕಂಪೆನಿಗಳಿಗೆ ಗೊತ್ತಾಗುತ್ತಿದೆ. ಅಮೆರಿಕದ ಚುನಾವಣೆಯಲ್ಲಿ ಶೇ.25ರಷ್ಟು ಮತದಾರರ ಒಲವು ತಿಳಿದುಕೊಂಡು ಕೇಂಬ್ರಿಡ್ಜ್ ಅನಾಲಿಟಿಕಾ, ಟ್ರಂಪ್ ಪಕ್ಷಕ್ಕೆ ಸಹಾಯ ಮಾಡಿದೆ ಎನ್ನಲಾಗುತ್ತಿದೆ. ಭಾರತದಲ್ಲಿ ಅನಾಲಿಟಿಕಾ ಕಂಪೆನಿಯ ಸೇವೆಯನ್ನು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳೆರಡೂ ಬಳಸಿರುವ ಆರೋಪಗಳಿವೆ.

ಅಮೆರಿಕದ ಫೆಡರಲ್ ಟ್ರೇಡ್ ಕಮಿಶನ್ (ಎಫ್‌ಟಿಸಿ) ತನಿಖೆ ಆರಂಭಿಸಿದ್ದು, ಫೇಸ್‌ಬುಕ್ ಕಂಪೆನಿಗೆ ಎಷ್ಟು ಸಹಸ್ರಕೋಟಿ ಡಾಲರ್ ದಂಡ ವಿಧಿಸಲಿದೆ ಎನ್ನುವುದೂ ಈಗ ಚರ್ಚೆಯ ವಿಷಯ. ಒಂದು ಅಂದಾಜಿನ ಪ್ರಕಾರ, ಮಾಹಿತಿ ಸೋರಿಕೆಯಾದ ಪ್ರತಿದಿನದ ಪ್ರತಿಯೊಂದು ಪ್ರಕರಣಕ್ಕೆ 40,000 ಡಾಲರ್ ದಂಡ ಪಾವತಿಸಬೇಕಾಗಬಹುದು! ಆದರೆ ಫೇಸ್‌ಬುಕ್, ತಾನು ಎಫ್‌ಟಿಸಿಯ ಯಾವುದೇ ನಿಯಮಗಳನ್ನು ಉಲ್ಲಂಘಿಸಿಲ್ಲ ಎಂದೇ ವಾದಿಸುತ್ತಿದೆ. ಇಂತಹ ನಿಯಮ ಉಲ್ಲಂಘನೆ ಹೊಸತೇನಲ್ಲ. ಈ ಹಿಂದೆ ವ್ಯಾಪಾರ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಗೂಗಲ್ ಸಂಸ್ಥೆಗೆ ಯೂರೋಪಿಯನ್ ಒಕ್ಕೂಟವು 2.7 ಶತಕೋಟಿ ಡಾಲರ್ ದಂಡ ವಿಧಿಸಿತ್ತು.

ಫೇಸ್‌ಬುಕ್ ಒಂದು ಪಬ್ಲಿಕ್ ಕಂಪೆನಿ. ಜೂಕರ್‌ಬರ್ಗ್ ಅದರ ಚೇರ್‌ಮನ್. ಇತರ ಎಂಟು ಮಂದಿ ನಿರ್ದೇಶಕರಿದ್ದಾರೆ. ಈ ನಿರ್ದೇಶಕರು ಒಟ್ಟು ಸೇರಿ ಮಾರ್ಕ್ ಜೂಕರ್‌ಬರ್ಗ್‌ನನ್ನು ಚೇರ್‌ಮನ್ ಹುದ್ದೆಯಿಂದ ಹೊರ ಹಾಕಬಹುದೆ.. ಎನ್ನುವ ಪ್ರಶ್ನೆಯೊಂದು ಎದ್ದಿದೆ. ಈ ಹಿಂದೆ ಇಂತಹ ಪ್ರಕರಣಗಳು ನಡೆದದ್ದಿವೆ. ಉಬರ್ ಕಂಪೆನಿಯ ಅಕ್ರಮ ಬಯಲಿಗೆ ಬಂದ ಮೇಲೆ ಅದರ ಸಹಸಂಸ್ಥಾಪಕ ಟ್ರಾವಿಸ್ ಕಲನಿಕ್‌ನನ್ನು ಕಂಪೆನಿಯಿಂದ ಹೊರದಬ್ಬಲಾಯಿತು. ಇಕ್ವಿಫ್ಯಾಕ್ಸ್ ಎಂಬ ದೈತ್ಯ ಕಂಪೆನಿಯ ಅಕ್ರಮಗಳು ಬಯಲಾದಾಗ ಚೇರ್‌ಮನ್ ರಿಚರ್ಡ್ ಸ್ಮಿತ್ ನಿವೃತ್ತಿ ಘೋಷಿಸಬೇಕಾಯಿತು. ಥೆರನಾಸ್ ಕಂಪೆನಿಯ ಸ್ಥಾಪಕಿ ಎಲಿಜಬೆತ್ ಹೋಮ್ಸ್‌ಳನ್ನು ಹತ್ತು ವರ್ಷಗಳ ಕಾಲ ಕಂಪೆನಿಗೆ ಮತ್ತೆ ಬರದಂತೆ ನಿಷೇಧಿಸಲಾಯಿತು. ಹಾಗೆಯೇ ಈಗ ಆಗಿರುವ ಪ್ರಮಾದದ ಹಿನ್ನೆಲೆಯಲ್ಲಿ ಜೂಕರ್‌ಬರ್ಗ್ ಫೇಸ್‌ಬುಕ್‌ನಿಂದ ಹೊರಬರಬಹುದೆ?

ಜೂಕರ್‌ಬರ್ಗ್ ಬಹಳ ಬುದ್ಧಿವಂತ. ಕೆಲವು ವರ್ಷಗಳ ಹಿಂದೆ ಫೇಸ್‌ಬುಕ್‌ನ 100 ಡಾಲರ್ ಮೌಲ್ಯದ ಷೇರುಗಳನ್ನು ತಲಾ 33 ಡಾಲರ್‌ಗಳ ಮೂರು ಷೇರುಗಳನ್ನಾಗಿ ವಿಭಜಿಸಲಾಗಿದೆ. ಅವುಗಳಲ್ಲಿ ಎರಡು ಷೇರುಗಳಿಗೆ ಮಹಾಸಭೆಯಲ್ಲಿ ಮತದಾನದ ಹಕ್ಕು ಇಲ್ಲ. ಒಂದು ಷೇರಿಗೆ ಮಾತ್ರ ಇದೆ ಎಂದು ನಿಯಮ ತಿದ್ದುಪಡಿ ಆಗಿದೆ. ಜೂಕರ್‌ಬರ್ಗ್ ಬಳಿ ಈಗ ಕಂಪೆನಿಯ ಶೇಕಡಾ 87ರಷ್ಟು ಮತ ಹಕ್ಕಿರುವ ಷೇರುಗಳಿವೆ. ಹಾಗಾಗಿ ಆತನನ್ನು ಅಲ್ಲಾಡಿಸುವುದು ಸುಲಭವಿಲ್ಲ. ಕಳೆದ ವರ್ಷ ಫೆಬ್ರುವರಿಯಲ್ಲಿ ಜೂಕರ್‌ಬರ್ಗ್ ವಿರುದ್ಧ ಕೆಲವು ಷೇರುದಾರರು ತೋಳೇರಿಸಿದರೂ ನಿರ್ದೇಶಕ ಮಂಡಳಿಯ ಅಷ್ಟೂ ಜನ ಮಾರ್ಕ್ ಹಿಂದೆ ಗಟ್ಟಿಯಾಗಿ ನಿಂತಿದ್ದರು. ಕೇಂಬ್ರಿಜ್ ಅನಾಲಿಟಿಕಾ ಹಗರಣ ಬಯಲಾದ ಬಳಿಕ ಷೇರುಪೇಟೆಯಲ್ಲಿ ಫೇಸ್‌ಬುಕ್ ಷೇರುಗಳು ಕುಸಿದು, 100 ಶತಕೋಟಿ ಡಾಲರ್‌ಗಳಷ್ಟು ನಷ್ಟ ಸಂಭವಿಸಿತ್ತು. ಹಾಗಿದ್ದೂ ಫೇಸ್‌ಬುಕ್ ಈಗ 440 ಶತಕೋಟಿ ಡಾಲರ್ ಆಸ್ತಿಮೌಲ್ಯ ಹೊಂದಿದೆ. 2017ರ ಕೊನೆಯ ತ್ರೈಮಾಸಿಕದಲ್ಲಿ ದಾಖಲೆ 12.97 ಶತಕೋಟಿ ಡಾಲರ್ ಆದಾಯ ಗಳಿಸಿದೆ. ಈ ಹಿನ್ನೆಲೆಯಲ್ಲಿ ಜೂಕರ್‌ಬರ್ಗ್‌ನನ್ನು ಕಂಪೆನಿಯಿಂದ ತೆಗೆದು ಹಾಕುವುದು ಅಸಾಧ್ಯದ ಮಾತು ಎನ್ನಬಹುದು.



ತಮಾಷೆಯ ಸಂಗತಿಯೊಂದಿದೆ: ಅಮೆರಿಕದ ಕಾಂಗ್ರೆಸ್ ಜೂಕರ್‌ಬರ್ಗ್ ತನಿಖೆಗೆ ಸಮಿತಿಯೊಂದನ್ನು ನೇಮಿಸಿದೆ. ಈ ಸಮಿತಿಯ ಎಲ್ಲ ಸದಸ್ಯರ ಎಲ್ಲ ಖಾಸಗಿ ಮಾಹಿತಿಗಳನ್ನೂ ಫೇಸ್‌ಬುಕ್ ಮೂಲಕ ಜೂಕರ್‌ಬರ್ಗ್ ಈಗಾಗಲೆ ಸಂಗ್ರಹಿಸಿದ್ದಾನಂತೆ. ಮಾಹಿತಿಗಳ ವಿಶ್ಲೇಷಣೆಯೂ ನಡೆದಿದೆಯಂತೆ. ಆ ಮೂಲಕ ಆ ಸದಸ್ಯರ ಮೇಲೂ ಪ್ರಭಾವ ಬೀರುವುದು ಜೂಕರ್‌ಬರ್ಗ್‌ಗೆ ಸಾಧ್ಯವಾಗಲಿದೆಯಂತೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65